# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

## ಕೆಂಪೇಗೌಡ ವಾರ್ಡ್ ನಂ-01ರಲ್ಲಿ

## ದಿನಾಂಕ: 07-01-2023 ರಂದು ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ದಿನಾಂಕ: 07-01-2023 ರಂದು ಶನಿವಾರ ಬೆಳಗ್ಗೆ 11.00 ಗಂಟೆಗೆ ಬಿ.ಬಿ.ಎಂ.ಪಿ ಯಲಹಂಕ ವಿಭಾಗದ ಕಛೇರಿಯಲ್ಲಿ ವಾರ್ಡ್ ನಂ-01ರ ವಾರ್ಡ್ ಸಮಿತಿಯ ಮಾನ್ಯ ನೊಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ನೆಡೆದ ವಾರ್ಡ್ ಕಮಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 01 | ಶ್ರೀ.ರಾಮಸಂಜೀವಯ್ಯ | ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪ ವಿಭಾಗ ಹಾಗೂ ಬಿ.ಬಿ.ಎಂ.ಪಿ ನೋಡಲ್ ಅಧಿಕಾರಿಗಳು (ವಾರ್ಡ್ ನಂ-01) |
| 02 | ಶ್ರೀ.ದೇವರಾಜಯ್ಯ.ಕೆ.ಬಿ. | ಸಹಾಯಕ ಅಭಿಯಂತರರು (ವಾರ್ಡ್ ನಂ-01) |
| 03 | ಶ್ರೀ.ಕೆ.ಎನ್. ಬಾಬುರೆಡ್ಡಿ | ಸಹಾಯಕ ಅಭಿಯಂತರರು (ವಿದ್ಯುತ್) |
| 04 | ಶ್ರೀ.ಅಶೋಕ್ .ಎಂ.ಆರ್ | ಸಹಾಯಕ ಕಂದಾಯ ಅಧಿಕಾರಿಗಳು ಯಲಹಂಕ ಉಪ ವಿಭಾಗ ಗೈರು ಹಾಜರಾಗಿರುತ್ತಾರೆ. |
| 05 | ಶ್ರೀ.ಶಿವಕುಮಾರ್.ಎ.ವಿ | ರೆವಿನ್ಯೂ ಇನ್ಸ್‌ಪೇಕ್ಟರ್ ಗೈರು ಹಾಜರಾಗಿರುತ್ತಾರೆ. |
| 06 | ಶ್ರೀಮತಿ. ಸುನಂದಮ್ಮ | ಹಿರಿಯ ಆರೋಗ್ಯ ಪರಿವೀಕ್ಷಕರು |
| 07 | ಶ್ರೀ. ವಿನಯ ಕುಮಾರ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 08 | ಶ್ರೀ. ಎನ್. ಶ್ರೀರಾಮ ರೆಡ್ಡಿ | ರೆವಿನ್ಯೂ ಇನ್ಸ್‌ಪೇಕ್ಟರ್ ಗೈರು ಹಾಜರಾಗಿರುತ್ತಾರೆ. |
| 09 | ಶ್ರೀ.ವಿವೇಕ್ | ಕಿರಿಯ ಆರೋಗ್ಯಪರಿವೀಕ್ಷಕರು ವಾಡ್-1 |
| 10 | ಶ್ರೀ.ಕುಮಾರ್ ಸ್ವಾಮಿ | ಜಾನುವಾರ ಅಧಿಕಾರಿಗಳು |
| 11 | ಶ್ರೀ.ನವೀನ್ ಕುಮಾರ್ ವಿ | ಸಹಾಯಕ ಅಭಿಯಂತರರು (ವಿದ್ಯುತ್) ಬಿ.ಬಿ.ಎಂ.ಪಿ |
| | ಬಡಾವಣೆ ಕ್ಷೇಮಾಭಿವೃದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು/ಸಾರ್ವಜನಿಕರು | |
| 01 | ಶ್ರೀ.ಹೇಮರಾಜ್ | ಸ್ಥಳೀಯ ಮುಖಂಡರು |
| 02 | ಶ್ರೀ. ಅ.ಬ.ಶಿವಕುಮಾರ್ | ಸ್ಥಳೀಯ ಮುಖಂಡರು |

| | | |
|---|---|---|
| 03 | ಶ್ರೀ.ರಾಮರೆಡ್ಡಿ | ಸ್ಥಳೀಯ ನಿವಾಸಿಗಳು |
| 04 | ಶ್ರೀ.ಎ.ಎಸ್.ರಾಜು | ಸ್ಥಳೀಯ ನಿವಾಸಿಗಳು |
| 05 | ಶ್ರೀ.ಶ್ರೀನಿವಾಸಲು | ಸ್ಥಳೀಯ ನಿವಾಸಿಗಳು |
| 06 | ಶ್ರೀ.ವೆಂಕಟೇಶ್ | ಮಾರುತಿನಗರ |
| 07 | ಶ್ರೀ.ದಶರಥ | ಯಲಹಂಕ |
| 08 | ಶ್ರೀ.ಎ.ಎನ್.ಮದುಸೂದನ್ (ಮಂಜುನಾಥ) | ಎಲೆಕ್ಟ್ರೀಕಲ್ಸ್ ಗುತ್ತಿಗೆದಾರರು |
| 09 | ಶ್ರೀ.ಆಕಾಶ್ | ಮಾರ್ಷಲ್ |

ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರ ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೋಡೆಲ್ ಅಧಿಕಾರಿರವರನ್ನು ಕೋರಲಾಯಿತು.

ಶ್ರೀ.ರಾಮಸಂಜೀವಯ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪ ವಿಭಾಗ ಹಾಗೂ ಸಮಿತಿಯ ನೋಡೆಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿ ಈ ಹಿಂದಿನ ಸಭೆಯಲ್ಲಿ ಅಂದರೆ ದಿನಾಂಕ: 17-12-2022 ರಂದು ನಡೆದ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದರು. ಹಾಗೂ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಸೂಚಿಸಿದರು. ಹಾಗೂ ಈ ಹಿಂದೆ ಕೈಗೊಂಡಿರುವ ಸಭೆಯ ನಡವಳಿಗಳನ್ನು ಸಭೆಯಲ್ಲಿ ವರದಿಯನ್ನು ಒದಲಾಯಿತು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ಯಲಹಂಕ ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ಡೌನ್ ಬಜಾರ್ ರಸ್ತೆಯಲ್ಲಿರುವ ಬಾರ್ ಹತ್ತಿರ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ ಪೈಪ್ ಲೈನ್ ಹೊಡೆದುಹೊಗಿದ್ದು, ಸರಿಪಡಿಸಿಕೊಡಬೇಕೆಂದು ಸಭೆಯಲ್ಲಿ ಸ್ಥಳೀಯ ನಾಗರೀಕರು ಕೋರಿದರು. | ಇದಕ್ಕೆ ಸಂಬಂದಿಸಿದಂತೆ ನೋಡೆಲ್ ಅಧಿಕಾರಿಗಳು ಮಾತನಾಡಿ ಸ್ಥಳ ಪರಿಶೀಲನೆ ಮಾಡಿ ಪೈಪ್‌ಲೈನ್ ರಿಪೇರಿ ಮಾಡಿಕೊಡುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು |
| 02 | ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ಯಲಹಂಕ ಒಲ್ಡ್ ಟೌನ್‌ನಲ್ಲಿ ಸ್ಯಾನಿಟರಿ ಲೈನ್‌ಅನ್ನು ತೆರೆದ ಚರಂಡಿಗೆ ಬಿಡುತ್ತಿರುವುದಾಗಿ ಸ್ಥಳೀಯ ನಿವಾಸಿಗಳು ಅಕ್ಷೇಪಣೆ ವ್ಯಕ್ತಪಡಿಸಿದರು. | ಇದಕ್ಕೆ ಸಂಬಂದಿಸಿದಂತೆ ನೋಡೆಲ್ ಅಧಿಕಾರಿಗಳು ಮಾತನಾಡಿ ಸ್ಥಳ ಪರಿಶೀಲನೆ ಮಾಡಿ ಸ್ಯಾನಿಟರಿಯನ್ನು ತೆರೆದ ಚರಂಡಿಗೆ ಬಿಡುತ್ತಿರುವವರ ವಿರುದ್ದ ದಂಡ ವಿಧಿಸಲು ಮತ್ತು ಸಂಪರ್ಕ ಪಡೆದುಕೊಳ್ಳುವಂತೆ ಸೂಚಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು |
| 03 | ಯಲಹಂಕ ಸರ್ಕಾರಿ ಆಸ್ಪತ್ರೆಯ ಎರಡೂ ಬದಿಯಲ್ಲಿ ಪಾತ್ರೆ ವ್ಯಾಪಾರ ಮಾಡುವ ವ್ಯಾಪಾರಿಗಳು ಪಾತ್ರೆಗಳನ್ನು ಪಾದಚಾರಿ | ಇದಕ್ಕೆ ಸಂಬಂದಿಸಿದಂತೆ ಪಾದಚಾರಿ ಮಾರ್ಗಗಳಲ್ಲಿ ಇಟ್ಟಿರುವ ಪಾತ್ರೆಗಳನ್ನು ತೆಗೆಯುವಂತೆ ಹಾಗೂ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-01. |

| | | | |
|---|---|---|---|
| | ಮಾರ್ಗಗಳಲ್ಲಿ ಇಟ್ಟಿರುವುದಾಗಿ ಇದರಿಂದ ಸಾರ್ವಜನಿಕರ ಒಡಾಟಕ್ಕೆ ತೊಂದರೆ ಉಂಟಾಗಿರುವುದಾಗಿ ಸಭೆಯಲ್ಲಿ ಸಾರ್ವಜನಿಕರು ದೂರನ್ನು ಸಲ್ಲಿಸಿದರು ಮತ್ತು ರಾತ್ರಿಯ ವೇಳೆ ತಳ್ಳುವ ಗಾಡಿಗಳನ್ನು ಪಾದಚಾರಿ ಮಾರ್ಗಗಳಲ್ಲಿ ಇಟ್ಟು ವ್ಯಾಪಾರಿಗಳು ಮನೆಗೆ ಹೊಗುತ್ತಿರುವವರ ವಿರುದ್ದ ಕ್ರಮ ಕೈಗೊಳ್ಳುವಂತೆ ಶ್ರೀ.ಹೆಮರಾಜ್ ರವರು ಸಭೆಗೆ ಕೋರಿದರು. | ತೆರವುಗೊಳಿಸುವಂತೆ ಸಂಬಂಧಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು. | |
| 04 | ಕೆಂಪೇಗೌಡ ವಾರ್ಡ್ ನಂ–01ರ ವ್ಯಾಪ್ತಿಯಲ್ಲಿರುವ ಯಲಹಂಕ ಒಲ್ಡ್ ಟೌನ್‌ನಲ್ಲಿ ಮತ್ತು ಮಹೇಶ್ವರಮ್ಮ ದೇವಸ್ಥಾನದ ಅರ್ಚ್‌ಯಿಂದ ನಗರೇಶ್ವರ ದೇವಸ್ಥಾನದ ವರೆಗೆ ರಸ್ತೆಯ ಎರಡು ಬದಿ ಚರಂಡಿಯನ್ನು ಕ್ಲಿನ್ ಮಾಡಿಕೊಡುವಂತೆ ಸ್ಯಾನಿಟರಿ ಲೈನ್ ಬಿಟ್ಟಿರುವುದಾಗಿ ಸ್ಥಳಿಯ ನಿವಾಸಿಗಳು ಸಭೆಯಲ್ಲಿ ಕೋರಿದರು. | ಇದಕ್ಕೆ ಸಂಬಂದಿಸಿದಂತೆ ನೊಡೆಲ್ ಅಧಿಕಾರಿಗಳು ಮಾತನಾಡಿ ಸ್ಥಳ ಪರಿಶೀಲನೆ ಮಾಡಿ ಸ್ಯಾನಿಟರಿಯನ್ನು ತೆರೆದ ಚರಂಡಿಗೆ ಬಿಡುತ್ತಿರುವವರ ವಿರುದ್ದ ದಂಡ ವಿಧಿಸಲು ಮತ್ತು ಸಂಪರ್ಕ ಪಡೆದುಕೊಳ್ಳುವಂತೆ ಸೂಚಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು |
| 05 | ಯಲಹಂಕ 1ನೇ ಮುಖ್ಯರಸ್ತೆ ಗಾಂಧಿನಗರ ಕೆ.ಹೆಚ್.ಬಿ ಕಾಲೋನಿ ಪ್ರಕಾಶ್ ಟಾಕಿಸ್ ರಸ್ತೆಯಲ್ಲಿ ಸಾತನೂರು ಸರ್ವಿಸ್ ಸ್ಟೇಷನ್ ರವರು ರಸ್ತೆಯಲ್ಲಿ ಕಾರುಗಳನ್ನು ಪಾರ್ಕಿಂಗ್ ಮಾಡುತ್ತಿರುವ ಬಗ್ಗೆ ಮತ್ತು ರಾತ್ರಿಯ ವೇಳೆ ಸರಕುಸಾಗಿಸುವ ಮೆಟಾಡೊರ್ ವಾಹನಗಳನ್ನು ನಿಲ್ಲಿಸುತ್ತಿರುವ ಬಗ್ಗೆ ಶ್ರೀ.ಅ.ಬ.ಶಿವಕುಮಾರ್ ರವರು ಸಭೆಯಲ್ಲಿ ದೂರನ್ನು ಸಲ್ಲಿಸಿದರು. | ಇದಕ್ಕೆ ಸಂಬಂದಿಸಿದಂತೆ ನೊಡೆಲ್ ಅಧಿಕಾರಿಗಳು ಮಾತನಾಡಿ ಟ್ರಾಫಿಕ್ ಪೊಲಿಸ್ ರವರಿಗೆ ಪತ್ರ ಬರೆದು ಸದರಿ ದೂರಿನ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದೆಂದು ಸಭೆಯಲ್ಲಿ ಉತ್ತರಿಸಿದರು. | ಟ್ರಾಫಿಕ್ ಪೊಲಿಸ್ ಯಲಹಂಕ ಸಂಚಾರಿ ಪೊಲಿಸ್ ಠಾಣೆ |
| 06 | ವಾರ್ಡ್ ನಂ–01ರ ವ್ಯಾಪ್ತಿಯಲ್ಲಿರುವ ಶ್ರೀನಿವಾಸಪುರ ಗ್ರಾಮದಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ಮಾನ್ಯ ಶಾಸಕರು ಯಲಹಂಕ ವಿಧಾನ ಸಭಾ ಕ್ಷೇತ್ರರವರು ಸೂಚಿಸಿರುವ ಮೇರೆಗೆ ಪ್ರತಿ ವಾರಕ್ಕೆ ಒಂದು ಭಾರಿ ಶ್ರೀನಿವಾಸಪುರ ಗ್ರಾಮದಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಕಿರಿಯ ಆರೋಗ್ಯ ಪರಿವೀಕ್ಷರಿಗೆ ನೊಡೆಲ್ ಅಧಿಕಾರಿಗಳು ತಿಳಿಸಿದರು. | | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ–01. |

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ.ಕೆ.ಬಿ.ದೇವರಾಜಯ್ಯ
ಸಹಾಯಕ ಅಭಿಯಂತರರು

ಶ್ರೀ.ರಾಮಸಂಜೀವಯ್ಯ
ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ
ನೋಡೆಲ್ ಅಧಿಕಾರಿಗಳು ವಾರ್ಡ್ ನಂ–01

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.

ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.

2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರಿಗೆ ಕಳುಹಿಸಿದೆ.

3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕಳುಹಿಸಿದೆ.
ಬಿ.ಬಿ.ಎಂ.ಪಿ ಯಲಹಂಕ ವಿಭಾಗ/ವಿದ್ಯುತ್/ರಸ್ತೆ ಮತ್ತು ಮೂಲಭೂತ

4. ಕಾರ್ಯಪಾಲಕ ಅಭಿಯಂತರರು, ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.
ಸೌಕಾರ್ಯ/ಯೋಜನೆ/ಕೆರೆಗಳು/ ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.
ಘನತ್ಯಾಜ್ಯ ನಿರ್ವಹಣೆ/ ವಿದ್ಯುತ್/ ಬೇಸ್ಕಾಂ/

5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನೆ/ಯಲಹಂಕ ವಲಯರವರ ಸೂಕ್ತ ಕ್ರಮಕ್ಕಾಗಿ.
ಬಿಡಬ್ಲ್ಯೂ.ಎಸ್.ಎಸ್.ಬಿ/ಬೋರೆವೆಲ್ ಡಿವಿಷನ್/ ಬಿ.ಬಿ.ಎಂ.ಪಿ ರವರ ಸೂಕ್ತ

6. ಸಹಾಯಕ ಕಂದಾಯ ಅಧಿಕಾರಿಗಳು ಯಲಹಂಕ ಉಪ ವಿಭಾಗ/ಜಾಹಿರಾತು
ಕ್ರಮಕ್ಕಾಗಿ.
ಸಂಚಾರಿ/ ಕಾನೂನು ಸುವ್ಯವಸ್ಥೆ/ ಯಲಹಂಕ

7. ಆರಕ್ಷಕ ನೀರಿಕ್ಷಕರು ಯಲಹಂಕ ಪೊಲೀಸ್ ಠಾಣೆ
ಬೆಂಗಳೂರು ರವರ ಸೂಕ್ತ ಕ್ರಮಕ್ಕಾಗಿ.

8. ಜಾನುವಾರಿ ಅಧಿಕಾರಿಗಳು ಪಶುಪಾಲನೆ ವಿಭಾಗ ಯಲಹಂಕ ವಲಯ ರವರ ಸೂಕ್ತ ಕ್ರಮಕ್ಕಾಗಿ.

9. ಅಧೀಕ್ಷಕರು ತೋಟಗಾರಿಕೆ ಇಲಾಖೆ ಬಿ.ಬಿ.ಎಂ.ಪಿ ಯಲಹಂಕ ವಲಯರವರ ಸೂಕ್ತ ಕ್ರಮಕ್ಕಾಗಿ.

10. ಡಿಪೋ ಮ್ಯಾನೇಜರ್ ಡಿಪೊ-13 ಪುಟ್ಟೇನಹಳ್ಳಿ ಡಿಪೋ ಯಲಹಂಕ ಬೆಂಗಳೂರು ಸೂಕ್ತ ಕ್ರಮಕ್ಕಾಗಿ.

11. ಕಛೇರಿ ಕಡತಕ್ಕೆ.